ಕೊಂಡುಕೊಳ್ಳಬೇಕಾಗಿತ್ತು. ಇವರು ಏನು ಮಾಡಿದರೆಂದರೆ M/s. Karnataka Antibiotics & Pharamaceuticals ಮತ್ತು M/s. Indian Immunological... ಇವರಿಂದ ಖರೀದಿಸಲು ರಾಜ್ಯ ಪಶುಸಂಗೋಪನಾ ಇಲಾಖೆಯಿಂದ ಇವರು ಪರ್ಮಿಷನ್ ತೆಗೆದುಕೊಂಡು 4-a ಇದರಲ್ಲಿ ಈ ಪ್ರಕ್ರಿಯೆಗೆ ವಿನಾಯಿತಿಯನ್ನೂ ಕೂಡ ಅವರು ತೆಗೆದುಕೊಂಡಿದ್ದಾರೆ. ಅಂದರೆ Transparency actಗೆ ಒಂದು ವಿನಾಯಿತಿಯನ್ನು ತೆಗೆದುಕೊಂಡರು. ಅದರ ಜೊತೆಗೆ Finance Departmentನವರು ಸರ್ಕಾರಿ ಔಷಧ ಉಗ್ರಾಣಕರಾರು ಒಪ್ಪಿಗೆ ಪಡೆದು ಸಂಸ್ಥೆಗಳಿಂದ ಅವಶ್ಯಕತೆಗನುಗುಣವಾಗಿ, ಎಷ್ಟು ಅಗತ್ಯ ಇತ್ತೋ ಅಷ್ಟನ್ನು ಕೊಳ್ಳಬೇಕಾಗಿತ್ತು. ಮಾನ್ಯ ಅರಗ ಜ್ಞಾನೇಂದ್ರರವರು-ಹೇಳುತ್ತಿರುವುದು ಬಹಳ ಸರಿ ಇದೆ. ಆದ್ದರಿಂದ ಅನಗತ್ಯವಾಗಿರುವುದನ್ನೂ ಸಹ ಕೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆ. ಮತ್ತೆ ಇವರು ಅದನ್ನು ಕೊಂಡುಕೊಳ್ಳುವುದಕ್ಕೆ Finance Department ನಿಂದ concurrence ತೆಗೆದುಕೊಳ್ಳಬೇಕಾಗಿತ್ತು. ಅದನ್ನು ತೆಗೆದುಕೊಳ್ಳದೆಯೇ 6 ಕೋಟಿ 74 ಲಕ್ಷ ರೂಪಾಯಿಗಳ ಔಷಧಿಯನ್ನು ಕೊಂಡುಕೊಂಡಿದ್ದಾರೆ. ಇದರಲ್ಲಿ ಕೊಂಡುಕೊಳ್ಳಬೇಕಾಗಿರುವುದು 4 ಕೋಟಿ 7 ಲಕ್ಷದ 17 ಸಾವಿರದ 43 ರೂ.ಗಳಿಗೆ ಕೊಳ್ಳಬೇಕಾಗಿರುವುದನ್ನು ಸಂಬಂಧಪಟ್ಟ ಅಧಿಕಾರಿ 6 ಕೋಟಿ 74 ಲಕ್ಷ ರೂ.ಗಳಿಗೆ ತೆಗೆದುಕೊಂಡಿದ್ದಾರೆ. ಆ ಅಧಿಕಾರಿಯ ಮೇಲೆ ಕಾನೂನು ರೀತ್ಯಾ ಕ್ರಮ ಜರುಗಿಸುತ್ತೇವೆ, ಈ ತರಹ ಆಗುವುದಕ್ಕೆ ಸರ್ಕಾರದಿಂದ ನಾವು ಬಿಡುವುದಿಲ್ಲ ಎನ್ನತಕ್ಕಂಥ ಮಾತನ್ನು ತಮ್ಮ ಮೂಲಕ ಮಾನ್ಯ ಸದಸ್ಯರಿಗೆ ಹೇಳಲಿಕ್ಕೆ ಇಚ್ಛೆಪಡುತ್ತೇನೆ.

30. ವಿಷಯ : ಬೆಂಗಳೂರು ದಕ್ಷಿಣ ತಾಲ್ಲೂಕು ಬೇಗೂರು ಹೋಬಳಿ ಬೊಮ್ಮನಹಳ್ಳಿ ನಗರ ಸಭಾ ವ್ಯಾಪ್ತಿಯಲ್ಲಿ ಬರುವ ಕೋಡಿ ಚಿಕ್ಕನಹಳ್ಳಿ ಗ್ರಾಮದ ಪ್ರೌಢ ಶಾಲೆಗೆ ಕಾದಿರಿಸಿದ ಗೋಮಾಳವನ್ನು ಖಾಸಗಿಯವರಿಗೆ ನೀಡಿರುವುದು

ಡಾ: ಕೆ. ಅನ್ನದಾನಿ (ಮಳವಳ್ಳಿ) : ಮಾನ್ಯ ಅಧ್ಯಕ್ಷರೆ, ಬೆಂಗಳೂರು ದಕ್ಷಿಣ ತಾಲ್ಲೂಕು ಬೇಗೂರು ಹೋಬಳಿ ಬೊಮ್ಮನಹಳ್ಳಿ ನಗರಸಭಾ ವ್ಯಾಪ್ತಿಗೆ ಬರತಕ್ಕಂಥ ಕೋಡಿಚಿಕ್ಕನಹಳ್ಳಿ ಗ್ರಾಮದಲ್ಲಿ ಸರ್ಕಾರಿ ಪ್ರೌಢ ಶಾಲೆಗೆ ಕಾದಿರಿಸಿದಂಥ ಸರ್ಕಾರಿ ಗೋಮಾಳವನ್ನು ಖಾಸಗಿಯವರಿಗೆ ಬರೆದು ಕೊಟ್ಟಿರುವಂಥ ವಿಚಾರವಾಗಿ ಮಾತನಾಡುತ್ತಿದ್ದೇನೆ. ಈ ಗ್ರಾಮದ ಸುತ್ತಮುತ್ತ ಸುಮಾರು 500 ಪರಿಶಷ್ಟ ಜಾತಿ / ಪರಿಶಿಷ್ಟ ವರ್ಗ ಹಿಂದುಳಿದವರು ಮತ್ತು ಅಲ್ಪಸಂಖ್ಯಾತರು ವಾಸಿಸತಕ್ಕಂಥ ಈ ಪ್ರದೇಶದಲ್ಲಿ ಯಾವುದೇ ಸರ್ಕಾರಿ ಪ್ರೌಢಶಾಲೆಗಳು ಇರುವುದಿಲ್ಲ. ಹಾಗಾಗಿ ಇಲ್ಲಿ ಪ್ರೌಢಶಾಲೆಗಾಗಿ ಮತ್ತು ಮಕ್ಕಳ ಆಟದ ಮೈದಾನಕ್ಕಾಗಿ ಈ ಸರ್ಕಾರಿ ಗೋಮಾಳವನ್ನು ಬಳಸಿಕೊಳ್ಳುತ್ತೇವೆಂದು ನಗರ ಸಭೆಯವರು ಅದಕ್ಕೆ ಕಾಂಪೌಂಡನ್ನು ಕೂಡ ಹಾಕಿ ಬಿಟ್ಟಿದ್ದಂಥ ಸಂದರ್ಭದಲ್ಲಿ ಖಾಸಗಿಯವರಿಗೆ ಇದನ್ನು "ಜಿಲ್ಲಾಧಿಕಾರಿಗಳು, ಸಂಖ್ಯೆ: ಎಎಲ್‌ಡಿ:ಎಸ್‌ಸಿಆರ್ 110/03-04, ದಿನಾಂಕ 21-06-2004ರಂದು ಖಾಸಗಿಯವರಿಗೆ ಮಂಜೂರು ಮಾಡಿರುತ್ತಾರೆ". ಇದಕ್ಕೆ ಆ

ಕ್ಷೇತ್ರದ ಶಾಸಕರಾದಂಥ ಸನ್ಮಾನ್ಯ ಆಶೋಕ್‌ರವರು 09–7–2003ರಲ್ಲಿ ಈ ಜಮೀನನ್ನು ಸರ್ಕಾರಿ ಪ್ರೌಢ ಶಾಲೆಗೆ ಕಾದಿರಿಸಬೇಕೆಂದು ಒಂದು ಪತ್ರವನ್ನು ಜಿಲ್ಲಾಧಿಕಾರಿಗಳಿಗೆ ಬರೆದಿದ್ದಾರೆ. ಅದಾದನಂತರಲ್ಲಿ ಮೊನ್ನೆ ಜಿಲ್ಲಾಧಿಕಾರಿಗಳು ಅದಕ್ಕೂ ಕೂಡ ಕಿವಿಗೊಡದೆ ಅದನ್ನು ಖಾಸಸಗಿಯವರಿಗೆ ಬರೆದು ಕೊಡಲಿಕ್ಕೆ ಪ್ರಯತ್ನವನ್ನು ಮಾಡಿದಂಥ ಸಂದರ್ಭದಲ್ಲಿ ಮತ್ತೆ ಶ್ರೀ ಆಶೋಕ್‌ರವರು ಪತ್ರವೊಂದನ್ನು ಬರೆದು ಇದನ್ನು ಖಾಸಗಿಯವರಿಗೆ ಬರೆದು ಕೊಡುತ್ತಿರತಕ್ಕಂಥ ಸಂದರ್ಭ ನನಗೆ ಗೊತ್ತಾಗಿದೆ, ಹಾಗಾಗಿ ದಯಮಾಡಿ ಈ ವ್ಯಾಪ್ತಿಯಲ್ಲಿ ಸರ್ಕಾರಿ ಪ್ರೌಢಶಾಲೆ ಇಲ್ಲದಿರುವುದರಿಂದ ಬಡ ಮಕ್ಕಳಿಗೆ ತೊಂದರೆಯಾಗುತ್ತದೆ, ಆ ಊರಿನಿಂದ ಜಯನಗರದ ಕಡೆಗೆ ಬರತಕ್ಕಂಥ ವ್ಯವಸ್ಥೆ ಇರುತ್ತದೆ, ಅಲ್ಲಿ ಯಾವುದೇ ಬಸ್ಸಿನ ಸರಿಯಾದ ವ್ಯವಸ್ಥೆ ಇಲ್ಲದಿರುವುದರಿಂದ ಅಲ್ಲಿ ನಮಗೆ ಹೈಸ್ಕೂಲ್ ಬೇಕೆಂದು ಕೇಳಿರುತ್ತಾರೆ. ಹಾಗೆಯೇ ಸ್ಥಳೀಯ ನಗರಸಭೆಯ ಸದಸ್ಯರಾದ ಶ್ರೀ ನಾರಾಯಣ್‌ರಾಜುರವರು ಜಿಲ್ಲಾಧಿಕಾರಿಗಳಿಗೆ ಒಂದು ಪತ್ರವನ್ನು ಬರೆದು ತಿಳಿಸಿದ್ದಾರೆ ಮತ್ತು ಎ.ಸಿ. ಯವರಿಗೂ ಕೂಡ ಪತ್ರವನ್ನು ಬರೆದಿರುತ್ತಾರೆ. ಮತ್ತೆ ತಹಶೀಲ್ದಾರರವರಿಗೂ ಪತ್ರವನ್ನು ಬರೆದಿರುತ್ತಾರೆ, ಹಾಗೆಯೇ ಅವರು ಅಂದಿನ ನಗರಾಭಿವೃದ್ಧಿ ಸಚಿವರಿಗೂ ಕೂಡ ಪತ್ರವನ್ನು ಬರೆದು ಇದನ್ನು ಸರ್ಕಾರಿ ಪ್ರೌಢ ಶಾಲೆಗೆ ಮೀಸಲಾಗಿರಿಸಬೇಕೆಂದು ಕೇಳಿದಂಥ ಸಂದರ್ಭದಲ್ಲಿ ಇದನ್ನೆಲ್ಲಾ ಗಾಳಿಗೆ ತೂರಿ ಮಾನ್ಯ ಜಿಲ್ಲಾಧಿಕಾರಿಗಳು ಈ ಜಾಗವನ್ನು ಖಾಸಗಿಯವರಿಗೆ ಪರಭಾರೆ ಮಾಡಿಕೊಟ್ಟಿದ್ದಾರೆ. ದಯಮಾಡಿ ಇದಾಗಬಾರದು. ಕೂಡಲೇ ಈ ಜಮೀನನ್ನು ವಾಪಸ್ಸು ಪಡೆದು ಇಲ್ಲಿ ಏನು ಸುತ್ತಮುತ್ತಲಿನ ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗದ ಜನ ವಾಸ ಮಾಡತಕ್ಕಂಥ ಜಾಗದಲ್ಲಿ ಸರ್ಕಾರಿ ಪ್ರೌಢ ಶಾಲೆ ಇಲ್ಲ, ಆ ಜಾಗದಲ್ಲಿ ಸರ್ಕಾರಿ ಪ್ರೌಢ ಶಾಲೆಯನ್ನು ತೆರೆಯಲಿಕ್ಕೆ ಮತ್ತು ಆಟದ ಮೈದಾನ ನಿರ್ಮಿಸಿಕೊಡಲಿಕ್ಕೆ ಸರ್ವೆ ನಂ. 9 ಮತ್ತು 10, 10ರ ವಿಸ್ತೀರ್ಣ ಒಂದು ಎಕರೆ 235 ಗುಂಟೆ ಜಮೀನನ್ನು ಸರ್ಕಾರ ಮತ್ತೆ ವಶಪಡಿಸಿಕೊಂಡು ಅವರಿಗೆ ಅನುಕೂಲ ಮಾಡಿಕೊಡಬೇಕೆಂದು ಮಾನ್ಯ ಸಭಾಧ್ಯಕ್ಷರ ಮೂಲಕ ಸರ್ಕಾರವನ್ನು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಎಂ.ಪಿ. ಪ್ರಕಾಶ್ (ಕಂದಾಯ ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಈ ವಿಚಾರವನ್ನು ಅವರು ಈಗ ಪ್ರಸ್ತಾಪಿಸಿದ್ದಾರೆ. ಮಾನ್ಯ ಜಿಲ್ಲಾಧಿಕಾರಿಗಳ ಜೊತೆ ಮಾತನಾಡಿ ಮತ್ತು ನಮ್ಮ ಕಾರ್ಯದರ್ಶಿಗಳಿಗೆ ಜೊತೆ ಮಾತನಾಡುತ್ತೇನೆ. ತಾವು ಎತ್ತಿರುವ ಎಲ್ಲಾ ಅಂಶಗಳಿಗನು ಗುಣವಾಗಿ, ನಾನು ಕಾನೂನುಬದ್ಧವಾಗಿ ಕ್ರಮ ಕೈಗೊಳ್ಳುತ್ತೇನೆ.

ಶ್ರೀ ಆರ್. ಆಶೋಕ್ : ಅವರು ನನ್ನ ಹೆಸರು ಹೇಳಿದ್ದಾರೆ. ಅದು ನನ್ನ ಕ್ಷೇತ್ರಕ್ಕೆ ಸಂಬಂಧಪಟ್ಟಿದ್ದು.

ಅಧ್ಯಕ್ಷರು : ನಿಮ್ಮ ಹೆಸರು ರೆಫರ್ ಮಾಡಿದ್ದಾರೆಯೇ?

ಶ್ರೀ ಆರ್. ಅಶೋಕ್ : ಮಾಡಿದ್ದಾರೆ. ನಾನು ಅವರ ವಿರುದ್ಧ ಮಾತನಾಡುವುದಿಲ್ಲ. ಒಳ್ಳೆಯ ವಿಷಯಕ್ಕೆ ಪ್ರಸ್ತಾಪ ಮಾಡಿದ್ದಾರೆ. ಅದಕ್ಕೆ ನನ್ನ ಅಬ್ಜೆಕ್ಷನ್ ಇಲ್ಲ. ನಾನು ಹಿಂದೆ ಮಾನ್ಯ ಮಂತ್ರಿಗಳಿಗೆ ಹೇಳಿದ್ದೇನೆ. ಸರ್ಕಾರಿ ಶಾಲೆಗಳಿಗೆ ಜಾಗ ಬೇಕಾಗಿದ್ದರೂ ಸಹ ಪ್ರೈವೇಟ್ ಶಾಲೆಗಳಿಗೆ ಏಕೆ ಕೊಡುತ್ತಾರೆನ್ನುವುದು ಬಹಳ ಯಕ್ಷ ಪ್ರಶ್ನೆ. ಈಗ ನನ್ನ ಶಾಸಕ ಮಿತ್ರರು ಏನು ಹೇಳಿದ್ದಾರೆ, ಅದಕ್ಕೆ ನನ್ನ ಅನುಮೋದನೆ ಇದೆ. ಅಲ್ಲಿ ನಗರಸಭೆ ಇರಬಹುದು, ಅಲ್ಲಿ ಇಬ್ಬರು ಶಾಸಕರು ಬರುತ್ತೇವೆ, ನಾವೆಲ್ಲಾ ಹೇಳಿದ್ದರೂ ಪ್ರೈವೇಟ್ ಶಾಲೆಗೆ ಸರ್ಕಾರಿ ಜಮೀನನ್ನು ಕೊಡುತ್ತಾರೆ. ಈ ರೀತಿಯಾಗಬಾರದೆನ್ನುವುದೇ ನನ್ನ ಮನವಿ.

31. ಮೇಲ್ಮನೆಯಲ್ಲಿ ತುಮಕೂರು ಜಿಲ್ಲಾ ಪರಿಷತ್ತಿನಲ್ಲಿ ನಡೆದ ಘಟನೆ ಬಗ್ಗೆ ಹಕ್ಕುಚ್ಯುತಿ ನಿರ್ಣಯವನ್ನು ಮಂಡಿಸಿ ಹಕ್ಕುಚ್ಯುತಿ ಸಮಿತಿಯ ಪರಿಶೀಲನೆಗೆ ಕಳುಹಿಸುವುದರ ಬಗ್ಗೆ

ಶ್ರೀ ಜೆ.ಸಿ. ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ) : ನಿನ್ನೆ ಮೇಲ್ಮನೆಯಲ್ಲಿ ತುಮಕೂರು ಜಿಲ್ಲಾ ಪರಿಷತ್‌ನಲ್ಲಿ ನಡೆದ ಘಟನೆ ಮೇಲೆ ಅಲ್ಲಿಯ ಸದಸ್ಯರು ಒಬ್ಬರು ಎತ್ತಿದ ವಿಷಯದ ಮೇಲೆ ಹಕ್ಕುಚ್ಯುತಿ ಸಮಿತಿಯ ಮುಂದೆ ವಿಷಯ ಪ್ರಸ್ತಾಪವಾಗಿದೆ. ಆ ಜಿಲ್ಲಾ ಪರಿಷತ್ ಸಭೆಯಲ್ಲಿ ಈ ಮನೆಯ ಸದಸ್ಯರಾದ ನಾವುಗಳು ಬಹಳ ಜನ ಇದ್ದೆವು. ಮತ್ತೆ, ಈ ಮನೆಯ ಸದಸ್ಯರು ಇದ್ದುದ್ದು ಗೊತ್ತಿದ್ದರೂ ಕೂಡ ವಿಷಯವನ್ನು ಮರೆ ಮಾಚಿ, ನನಗೆ ಆ ಜಿಲ್ಲಾ ಪರಿಷತ್ ಸಭೆಯಲ್ಲಿ ಆಗಿದೆ ಎಂಬ ನೋವನ್ನು ಒಂದನ್ನೇ ಆಧಾರವಾಗಿಟ್ಟುಕೊಂಡು ಏನು ಹಕ್ಕುಚ್ಯುತಿಗೆ ರೆಫರ್ ಮಾಡಿದ್ದಾರೆ, ಮತ್ತೆ, ಆ ಆಧಾರದ ಮೇಲೆ ತುಮಕೂರು ಜಿಲ್ಲಾ ಪಂಚಾಯತ್ ಅನ್ನು ಸೂಪರ್‌ಸೀಡ್ ಮಾಡಲು ನಾವು ಯೋಚಿಸುತ್ತೇವೆಂದು ಅಲ್ಲಿನ ಸಭಾ ನಾಯಕರು, ಮಂತ್ರಿಗಳು ಹೇಳಿಕೆ ಕೊಟ್ಟಿದ್ದಾರೆ. ಇದರಿಂದ ನಮಗೆ ಈ ಮನೆಯಲ್ಲಿ ಕೆಲಸ ಮಾಡುತ್ತಿರುವ ಸದಸ್ಯರಿಗೆ ನಿಜವಾಗಿ ಹಕ್ಕುಚ್ಯುತಿಯಾಗಿದೆ. ನಾವು ಆ ಕಾಗದದಲ್ಲಿ ಬರೆದಿದ್ದೇವೆ. ಹಕ್ಕುಚ್ಯುತಿ ನಿರ್ಣಯ ಮಂಡನೆ ಮಾಡುವುದಕ್ಕಾಗದೇ ಇರುವುದರಿಂದ, ಅದಕ್ಕೆ ಸಮಯ ಇಲ್ಲದಿರುವುದರಿಂದ, ಶೂನ್ಯವೇಳೆಯಲ್ಲಿ ಈ ವಿಷಯವನ್ನು ನಾವು ಪ್ರಸ್ತಾಪಿಸುತ್ತಿದ್ದೇವೆಂದು ಹೇಳಿದ್ದೇವೆ. ಕನಿಷ್ಠ ಸೌಜನ್ಯ, ನಮಗೊಂದು ಸೂಚನೆ ಕೊಟ್ಟು, ಆಲ್ಲೇನು ನಡೆಯಿತೆಂದು ಕೇಳಿ, ಇಂಥ ವಿಷಯಗಳನ್ನು ಮೇಲ್ಮನೆಯವರು ಹಕ್ಕುಚ್ಯುತಿಗೆ ರೆಫರ್ ಮಾಡಬೇಕಾದುದು ಸೌಜನ್ಯ. ಆ ಕೆಲಸ ಮಾಡಿಲ್ಲ. ಇವತ್ತು ತಕ್ಷಣ ಏನು ಈ ವಿಷಯಕ್ಕೆ ಹಕ್ಕುಚ್ಯುತಿ ನಿರ್ಣಯಕ್ಕೆ ಕೇಳಿದ್ದಾರೆ, ಹಕ್ಕುಚ್ಯುತಿ ಸಮಿತಿ ಮುಂದೆ ರೆಫರ್ ಮಾಡಿದ್ದಾರೆ, ಅದನ್ನು ತಡೆಹಿಡಿಯಬೇಕು. ವಿನಾಕಾರಣ ಒಬ್ಬೊಬ್ಬ ಸದಸ್ಯರು ಹೇಳುವ ಹೇಳಿಕೆಯನ್ನು ಆಧಾರವಾಗಿಟ್ಟುಕೊಂಡು, ಜಿಲ್ಲಾ ಪರಿಷತ್ ಅಂಥ ಸ್ವಾಯತ್ತ ಸಂಸ್ಥೆಗಳನ್ನು, ಸಂವಿಧಾನಾತ್ಮಕವಾಗಿ ರಚನೆಯಾಗಿರುವ ಸಂಸ್ಥೆಗಳನ್ನು ಸೂಪರ್ ಸೀಡ್ ಮಾಡುತ್ತೇವೆನ್ನುವ ಹೇಳಿಕೆಗಳನ್ನು ಬಿಡಬೇಕೆಂದು